ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ-584 133, ರಾಯಚೂರು, ಕರ್ನಾಟಕ ರಾಜ್ಯ, ಭಾರತ
ಆಡಳಿತ ವಿಭಾಗ E-mail: registrarrur@gmail.com

ಸಂಖ್ಯೆ: ರಾವಿರಾ/ಆಡಳಿತ/ಸಿಂಡಿಕೇಟ್ ಸಭೆ/2022-23/ ದಿನಾಂಕ: 18.04.2022

## ಸಿಂಡಿಕೇಟ್ ಸಾಮಾನ್ಯ ಸಭೆಯ ಸೂಚನಾ ಪತ್ರ

ವಿಷಯ: ದಿನಾಂಕ: 22.04.2022 ರಂದು ಶುಕ್ರವಾರ ಬೆಳಿಗ್ಗೆ 11:00 ಗಂಟೆಗೆ ಸಿಂಡಿಕೇಟ್ ಸಭೆಯನ್ನು ಜರುಗಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 18.04.2022

***

ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಸಿಂಡಿಕೇಟಿನ ಸಾಮಾನ್ಯ ಸಭೆಯನ್ನು ಶುಕ್ರವಾರ, **ದಿನಾಂಕ: 22.04.2022 ರಂದು ಬೆಳಿಗ್ಗೆ 11.00 ಗಂಟೆಗೆ ವಿಶ್ವವಿದ್ಯಾಲಯದ ಆಡಳಿತ ಕಛೇರಿಯಲ್ಲಿ ಆಯೋಜಿಸಲಾಗಿದೆ.** ಕಾರಣ, ತಾವು ಈ ಸಭೆಗೆ ಆಗಮಿಸಬೇಕಾಗಿ ಕೋರಲಾಗಿದೆ.

### ಸಾಮಾನ್ಯ ಸಭೆಯ ಕಾರ್ಯಸೂಚಿ

1. ದಿನಾಂಕ: 11.02.2022 ರಂದು ನಡೆದ ಸಿಂಡಿಕೇಟ್ ಸಭೆಯ ನಡುವಳಿಗಳನ್ನು ದೃಢೀಕರಣ ಮಾಡುವುದು.
2. ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ರಾಯಚೂರು ವಿಶ್ವವಿದ್ಯಾಲಯಕ್ಕೆ ಸಿಂಡಿಕೇಟ್ ಸದಸ್ಯರೆಂದು ನಾಮ ನಿರ್ದೇಶನ ಮಾಡಿದ ಸದ್ಯಸರುಗಳಿಗೆ ಸ್ವಾಗತಿಸುವುದು.
3. ನೂತನವಾಗಿ ಸ್ಥಾಪಿತವಾದ ರಾಯಚೂರು ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಕಛೇರಿ ವಾಹನಗಳನ್ನು ಖರೀದಿಸುವ ಕುರಿತು.
4. UUCMS ಕುರಿತು ಚರ್ಚೆ.
5. ರಾಯಚೂರು ವಿಶ್ವವಿದ್ಯಾಲಯದ ವಸತಿ ನಿಲಯದ ಕೊಠಡಿಗಳನ್ನು ನವೀಕರಣಗೊಳಿಸುವ ಕುರಿತು ಹಾಗೂ ಸಮಿತಿ ಸಲ್ಲಿಸಿರುವ ವರದಿ ಬಗ್ಗೆ ಚರ್ಚೆ.
6. ರಾಯಚೂರು ವಿಶ್ವವಿದ್ಯಾಲಯಕ್ಕೆ ವಿದ್ಯುತ್ ಅಭಾವ/ವೋಲ್ಟೇಜ್ ಹೆಚ್ಚು-ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಹೊಸ ಟ್ರಾನ್ಸ್‌ಫಾರ್ಮರ್ ಅನ್ನು ಅಳವಡಿಸುವ ಕುರಿತು.
7. ಮಾನ್ಯ ಕುಲಪತಿಗಳ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳ ಚರ್ಚೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

18/4/22

(ಪ್ರೊ. ವಿಶ್ವನಾಥ ಎಂ.)
**ಕುಲಸಚಿವರು**

ಇವರಿಗೆ,

1. ಮಾನ್ಯ ಕುಲಪತಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2. ರಾಯಚೂರು ವಿಶ್ವವಿದ್ಯಾಲಯದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ.

ರಾಯಚೂರು ವಿಶ್ವವಿದ್ಯಾಲಯ
ರಾಯಚೂರು ಯೆರಗೇರಾ-584 133, ಕರ್ನಾಟಕರಾಜ್ಯ, ಭಾರತ
ಆಡಳಿತ ವಿಭಾಗ E-mail: registrarrur@gmail.com

ಕ್ರ.ಸಂ. ರಾವಿರಾ/ಸಿಂಡಿಕೇಟ್/ಸಾ.ಸಭೆ/2021-22/ ದಿನಾಂಕ: 25.04.2022

ಗೆ,
ಮಾನ್ಯ ಕುಲಪತಿಗಳು,
ರಾಯಚೂರು ವಿಶ್ವವಿದ್ಯಾಲಯ,
ಯರಗೇರಾ, ರಾಯಚೂರು-584133

ಮಾನ್ಯರೇ,

ವಿಷಯ: ದಿನಾಂಕ: 22.04.2022 ರಂದು ಬೆಳಿಗ್ಗೆ 11.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಕಳುಹಿಸುವ ಕುರಿತು.

***

ದಿನಾಂಕ: 22.04.2022 ರಂದು ಬೆಳಿಗ್ಗೆ 11.30 ಗಂಟೆಗೆ, ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಿಂಡಿಕೇಟ ಸಾಮಾನ್ಯ ಸಭೆಯ ನಡವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮಗೆ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,

(ಪ್ರೊ. ವಿಶ್ವನಾಥ ಎಂ.,)
ಕುಲಸಚಿವರು,
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು.

ಅಡಕ: ಸಿಂಡಿಕೇಟ್ ನಡವಳಿಗಳು

ಪ್ರತಿಗಳು:
1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560 001.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣಇಲಾಖೆ (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001
3. ಕುಲಸಚಿವರು (ಮೌಲ್ಯಮಾಪನ), ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
4. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
6. ಉಪ ಗ್ರಂಥಪಾಲಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
7. ಉಪ ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
8. ನೋಡಲ್ ಅಧಿಕಾರಿ, ಇ-ಗವರ್ನನ್ಸ್, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
9. ಕುಲಪತಿಗಳ ಆಪ್ತಕಾಯದರ್ಶಿ/ ಕುಲಪತಿಗಳ ಆಪ್ತಸಹಾಯಕ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
10. ಕಚೇರಿ ಕಡತಕ್ಕೆ.

# ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ: 22.04.2022 ರಂದು ಬೆಳಿಗ್ಗೆ 11.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳು.

## ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

1. ಪ್ರೊ. ಹರೀಶ ರಾಮಸ್ವಾಮಿ, ಮಾನ್ಯ ಕುಲಪತಿಗಳು – ಅಧ್ಯಕ್ಷರು
2. ಶ್ರೀ ಶಿವಬಸಪ್ಪ ಮಾಲಿಪಾಟೀಲ – ಸಿಂಡಿಕೇಟ್ ಸದಸ್ಯರು
3. ಶ್ರೀ ನಾಗೇಂದ್ರ ಪ್ರಸಾದ್ ಎ.ಎಂ. – ಸಿಂಡಿಕೇಟ್ ಸದಸ್ಯರು
4. ಪ್ರೊ. ಭಜಂತ್ರಿ ವೈ.ಎಂ. – ಸಿಂಡಿಕೇಟ್ ಸದಸ್ಯರು
5. ಶ್ರೀಮತಿ ಕಾವೇರಿ ಕೇದಾರನಾಥ್ – ಸಿಂಡಿಕೇಟ್ ಸದಸ್ಯರು
6. ಶ್ರೀ ಶಂಕರ ರೆಡ್ಡಿ ಜಿ., ಬಿನ್ ಗೋಪಾಲ ರೆಡ್ಡಿ – ಸಿಂಡಿಕೇಟ್ ಸದಸ್ಯರು
7. ಪ್ರೊ. ಯರಿಸ್ವಾಮಿ ಎಂ., ಕುಲಸಚಿವರು (ಮೌಲ್ಯಮಾಪನ) – ಸಿಂಡಿಕೇಟ್ ಸದಸ್ಯರು
8. ಪ್ರೊ. ವಿಶ್ವನಾಥ ಎಂ., ಕುಲಸಚಿವರು – ಸದಸ್ಯ ಕಾರ್ಯದರ್ಶಿಗಳು

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು, ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ನಾಮ ನಿರ್ದೇಶನಗೊಂಡ 02 ಸದಸ್ಯರುಗಳನ್ನು ಹಾಗೂ ಸರ್ಕಾರದಿಂದ ನಾಮ ನಿರ್ದೇಶನಗೊಂಡ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಕಲಂ/ ಐಟಂ ನಂ. | ವಿಷಯ | ಸಿಂಡಿಕೇಟ್ ನಿರ್ಣಯ |
|---|---|---|
| 1. | ದಿನಾಂಕ: 11.02.2022 ರಂದು ನಡೆದ ಸಿಂಡಿಕೇಟ್ ಸಭೆಯ ನಡುವಳಿಗಳನ್ನು ದೃಢೀಕರಣ ಮಾಡುವುದು. | ಯಾವ ಬದಲಾವಣೆಗಳು ಇಲ್ಲದೆ ಅನುಮೋದಿಸಲಾಯಿತು. |
| 2. | ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ರಾಯಚೂರು ವಿಶ್ವವಿದ್ಯಾಲಯಕ್ಕೆ ಸಿಂಡಿಕೇಟ್ ಸದಸ್ಯರೆಂದು ನಾಮ ನಿರ್ದೇಶನ ಮಾಡಿದ ಸದ್ಯಸರುಗಳಿಗೆ ಸ್ವಾಗತಿಸುವುದು. | ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳ ನಾಮ ನಿರ್ದೇಶನ ಮಾಡಿದ ಸಿಂಡಿಕೇಟ್ ಸದಸ್ಯರಾದ ಶ್ರೀ ಶಿವಬಸಪ್ಪ ಮಾಲಿಪಾಟೀಲ ಹಾಗೂ ಶ್ರೀ ನಾಗೇಂದ್ರ ಪ್ರಸಾದ್ ಎ.ಎಂ., ಇವರುಗಳನ್ನು ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿಗಳು ಹಾಗೂ ಸದಸ್ಯರುಗಳು ಸಿಂಡಿಕೇಟ್ ಸಭೆಗೆ ಸ್ವಾಗತಿಸಿದರು. |
| 3. | ನೂತನವಾಗಿ ಸ್ಥಾಪಿತವಾದ ರಾಯಚೂರು ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಕಛೇರಿ ವಾಹನಗಳನ್ನು ಖರೀದಿಸುವ ಕುರಿತು. Engineer | ರಾಯಚೂರು ವಿಶ್ವವಿದ್ಯಾಲಯವು ನೂತನವಾಗಿ ಸ್ಥಾಪಿತಗೊಂಡಿದ್ದು, ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ 05 ಕಛೇರಿ ವಾಹನಗಳನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂದಿಂದ ಖರೀದಿಸಲು ಸಿಂಡಿಕೇಟ್ ಅನುಮೋದಿಸಿತು.<br>1. ಮಾನ್ಯ ಕುಲಪತಿಗಳಿಗೆ – ಇನ್ನೋವಾ ಕಾರ್<br>2. ಕುಲಸಚಿವರು – ಎರ್ಟಿಗಾ ಕಾರ್<br>3. ಕುಲಸಚಿವರು (ಮೌಲ್ಯ ಮಾಪನ) – ಎರ್ಟಿಗಾ ಕಾರ್<br>4. ಹಣಕಾಸು ಅಧಿಕಾರಿಗಳು – ಹುಂಡೈ/ಔರಾ/ಟಾಟಾ ಕಾರ್<br>5. ಇಂಜಿನಿಯರಿಂಗ್ ವಿಭಾಗ – ಬೊಲೊರೆ ಜೀಪ್ |
| 4. | UUCMS ಕುರಿತು ಚರ್ಚೆ. | UUCMS ಕುರಿತು ಸುದೀರ್ಘ ಚರ್ಚೆ ನಡೆಯಿತು. ಪರೀಕ್ಷಾ ಕಾರ್ಯವನ್ನು ಅತೀ ಶೀಘ್ರದಲ್ಲಿಯೇ ನಡೆಸಲು ಬೇಕಾಗುವಂತಹ ಎಲ್ಲಾ ಪೂರ್ವ ಸಿದ್ದತೆಗಳನ್ನು ಮಾಡಿಕೊಂಡ ನಂತರ 4ನೇ ಮೇ 2022 ರಿಂದ ಪರೀಕ್ಷೆಗಳನ್ನು ನಡೆಸಲು ನಿರ್ಧರಿಸಲಾಯಿತು. UUCMS ತಂತ್ರಾಂಶದಲ್ಲಿರುವ ತಾಂತ್ರಿಕ ತೊಂದರೆ ನಿವಾರಣೆ ಬಗ್ಗೆ ಎಲ್ಲಾ ಕ್ರಮಗಳನ್ನು ಕೈಗೊಂಡು, ಸಾಧ್ಯವಾಗದ ಪಕ್ಷದಲ್ಲಿ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಪರೀಕ್ಷೆಯನ್ನು ಯು.ಜಿ.ಸಿ. ನಿಯಮಾನುಸಾರ ನಡೆಸಲು ಸಿಂಡಿಕೇಟ್ ಅನುಮೋದಿಸಿತು. |

| | | |
|---|---|---|
| 5. | ರಾಯಚೂರು ವಿಶ್ವವಿದ್ಯಾಲಯದ ವಸತಿ ನಿಲಯದ ಕೊಠಡಿಗಳನ್ನು ನವೀಕರಣಗೊಳಿಸುವ ಕುರಿತು ಹಾಗೂ ಸಮಿತಿ ಸಲ್ಲಿಸಿರುವ ವರದಿ ಬಗ್ಗೆ ಚರ್ಚೆ. | ವಿಶ್ವವಿದ್ಯಾಲಯದ ವಸತಿ ನಿಲಯದ ಸಮಿತಿಯು, ವಸತಿ ನಿಲಯಗಳ ಕೊಠಡಿಗಳನ್ನು ನವೀಕರಿಸುವ ಹಾಗೂ ಇನ್ನಿತರೆ ವಿಷಯಗಳ ವಿವರವಾದ ವರದಿಯನ್ನು ಮಂಡಿಸಿದರು. ಸಮಿತಿಯ ಅಧ್ಯಕ್ಷರಾದ ಶ್ರೀ ಶಂಕರ ರೆಡ್ಡಿ ಇವರು ಸಭೆಗೆ ಅತೀ ತುರ್ತಾಗಿ ಅವಶ್ಯಕತೆ, ಇರುವಂತಹ ಟೇಬಲ್ಸ್, ಚೇರ್ಸ್, ಬೆಂಚಿಗಳು, ಇತ್ಯಾದಿ ಅವಶ್ಯಕವಿರುವ ಪೀಠೋಪಕರಣಗಳನ್ನು ಖರೀದಿಸಬೇಕೆಂದು ಸೂಚಿಸಿದರು. ಇದರ ಜೊತೆ ವರದಿಯಲ್ಲಿರುವ ಸಿವಿಲ್ ಕಾಮಗಾರಿಗಳನ್ನು ಹಂತ, ಹಂತವಾಗಿ ಕೈಗೊಳ್ಳಲು ಸಭೆಗೆ ವಿವರಿಸಿದರು. ಮಾನ್ಯ ಸಿಂಡಿಕೇಟ್ ಅಧ್ಯಕ್ಷರು ವರದಿಯಲ್ಲಿರುವಂತಹ ಪೀಠೋಪಕರಣಗಳ ಸಂಖ್ಯೆ, ಧರ ನಮೂನೆಗಳನ್ನು ತಿಳಿದುಕೊಂಡು ಕ್ರಮ ಕೈಗೊಳ್ಳಲು ಸೂಚಿಸಿದರು. ಇದಕ್ಕೆ ಸಿಂಡಿಕೇಟ್ ಅನುಮೋದಿಸಿತು. |
| 6. | ರಾಯಚೂರು ವಿಶ್ವವಿದ್ಯಾಲಯಕ್ಕೆ ವಿದ್ಯುತ್ ಅಭಾವ/ವೋಲ್ಟೇಜ್ ಹೆಚ್ಚು-ಕಡಿಮೆ ಯಾಗುತ್ತಿರುವ ಹಿನ್ನೆಲೆಯಲ್ಲಿ ಹೊಸ ಟ್ರಾನ್ಸ್‌ಫಾರ್ಮರ್ ಅನ್ನು ಅಳವಡಿಸುವ ಕುರಿತು. File Not prepared | ರಾಯಚೂರು ವಿಶ್ವವಿದ್ಯಾಲಯವು ಗ್ರಾಮೀಣ ಪ್ರದೇಶದಲ್ಲಿರುವುದರಿಂದ ವಿದ್ಯುತ್ ಅಭಾವ/ವೋಲ್ಟೇಜ್ ತುಂಬಾ ಇದೆ. ಆದ್ದರಿಂದ ವಿಶ್ವವಿದ್ಯಾಲಯಕ್ಕೆ ಟ್ರಾನ್ಸ್‌ಫಾರ್ಮರ್ ಅವಶ್ಯಕತೆ ಇದೆ. ಜೆಸ್ಕಾಂ ವಿಭಾಗದಿಂದ ಖರೀದಿಸಿ, ಅವರಿಂದಲೇ ಟ್ರಾನ್ಸ್‌ಫಾರ್ಮರ್ ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ಸಿಂಡಿಕೇಟ್ ಅನುಮೋದಿಸಿತು. |
| 7. | ಮಾನ್ಯ ಕುಲಪತಿಗಳ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳ ಚರ್ಚೆ. | ಮಾನ್ಯ ಅಧ್ಯಕ್ಷರುಗಳು **07** ಟೇಬಲ್ ಅಜೆಂಡಾಗಳನ್ನು ಮಂಡಿಸಲಾಯಿತು.<br>1) ವಿಶ್ವವಿದ್ಯಾಲಯದಲ್ಲಿ ನೀರಿನ ಸಮಸ್ಯೆ ತುಂಬಾ ಇದ್ದು, ಸಮಸ್ಯೆಯನ್ನು ನಿವಾರಿಸಲು ಖಾಸಗಿ ಕಂಪನಿಯ ವತಿಯಿಂದ ಕನಿಷ್ಠ 04 ಬೋರ್‌ವೆಲ್‌ಗಳನ್ನು ಹಾಕಿಸಲು ಸಿಂಡಿಕೇಟ್ ಅನುಮೋದಿಸಲಾಯಿತು.<br>2) ವಿಶ್ವವಿದ್ಯಾಲಯದ ಆವರಣದಲ್ಲಿ ಅನಧಿಕೃತವಾಗಿ ವಸತಿ ನಿಲಯಗಳನ್ನು ವಾಸಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ವಿರುದ್ಧ ಕಾನೂನು ಕ್ರಮ ಕೈಗೊಂಡು ಇವರನ್ನು ತೆರವುಗೊಳಿಸಲು ಸಿಂಡಿಕೇಟ್ ಅನುಮೋದಿಸಲಾಯಿತು.<br>3) ಅತಿಥಿ ಉಪನ್ಯಾಸಕರುಗಳನ್ನು 2021-22ನೇ ಶೈಕ್ಷಣಿಕ ಸಾಲಿನಲ್ಲಿ ಮುಂದುವರೆಸಲು ಒಂದು ಸಮಿತಿಯನ್ನು ರಚಿಸಲು ಸಿಂಡಿಕೇಟ್ ನಿರ್ಧರಿಸಿತು. ಸಮಿತಿಯ ಅಧ್ಯಕ್ಷರಾಗಿ ಶ್ರೀ ವೈ.ಎಂ. ಭಜಂತ್ರಿ, ಸಿಂಡಿಕೇಟ್ ಸದಸ್ಯರು, ಪ್ರೊ. ಪಿ. ಭಾಸ್ಕರ್, ನೋಡಲ್ ಅಧಿಕಾರಿ ಇವರನ್ನು ಸದಸ್ಯರನ್ನಾಗಿ ಹಾಗೂ ಡಾ. ಜಿ.ಎಸ್. ಬಿರಾದಾರ್, ಉಪ ಕುಲಸಚಿವರು ಇವರನ್ನು ಸಮಿತಿಯ ಸಂಚಾಲಕರನ್ನಾಗಿ ನೇಮಿಸಲಾಯಿತು. ಸಮಿತಿಯು ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ/ವರದಿಯ ಹಿನ್ನೆಲೆಯಲ್ಲಿ ಅತಿಥಿ ಉಪನ್ಯಾಸಕರುಗಳನ್ನು ಮುಂದುವರೆಸಲು ಕ್ರಮ ಕೈಗೊಳ್ಳಬೇಕೆಂದು ಸಿಂಡಿಕೇಟ್ ಅನುಮೋದಿಸಿತು.<br>4) ಶ್ರೀ ಶಂಕರ ರೆಡ್ಡಿ, ಸಿಂಡಿಕೇಟ್ ಸದಸ್ಯರು, ಇವರು ನಗರಸಭೆಯ ವತಿಯಿಂದ ವಿಶ್ವವಿದ್ಯಾಲಯಕ್ಕೆ ನೀರಿನ ಸರಬರಾಜು ಮಾಡಿಸುವ ಕುರಿತು ಮಾನ್ಯ ಆಯುಕ್ತರು, ನಗರಸಭೆ, ರಾಯಚೂರು ಇವರನ್ನು ಸಂಪರ್ಕಿಸಿ ಕ್ರಮ ಕೈಗೊಳ್ಳುವಂತೆ ಮಾನ್ಯ ಅಧ್ಯಕ್ಷರು ನಿರ್ದೇಶಿಸಿದರು.<br>5) ರಾಯಚೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳ ವಿವರಗಳನ್ನು ಪಡೆದು ಅರ್ಹತಾಪಟ್ಟಿಯನ್ನು ತಯಾರಿಸಲು ಉಪ ಕುಲಸಚಿವರಿಗೆ ಮಾನ್ಯ ಅಧ್ಯಕ್ಷರು ನಿರ್ದೇಶಿಸಿದರು.<br>6) ವಿಶ್ವವಿದ್ಯಾಲಯದ ಹಳೆಯ ಕಾರನ್ನು ರಿಪೇರಿ ಮಾಡಲು ಅಂದಾಜು ವೆಚ್ಚ ರೂ. 3.00 ಲಕ್ಷಗಳು ತಗಲುವ ಸಾಧ್ಯತೆ ಇರುವುದರಿಂದ ಈ ಕಾರನ್ನು (Scrap) ಗುಜರಿಗೆ ಹಾಕಲು ಸಿಂಡಿಕೇಟ್ ಅನುಮೋದಿಸಿತು. |

| | | |
|---|---|---|
| | | 7) ರಾಯಚೂರು ವಿಶ್ವವಿದ್ಯಾಲಯವು ಜ್ಞಾನ ತುಂಗಾ ಆವರಣದಲ್ಲಿದೆ. ಆದರೆ ಸದರಿ ಜ್ಞಾನ ತುಂಗಾ ಹೆಸರನ್ನು ಕೃಷ್ಣತುಂಗಾ ಎಂದು ಮರು ನಾಮಕರಣ ಮಾಡಲು ಸಿಂಡಿಕೇಟ್ ಅನುಮೋದಿಸಿತು. |

22/4/22

ಕುಲಸಚಿವರು/ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

22.4.2022

ಕುಲಪತಿಗಳು/ಅಧ್ಯಕ್ಷರು
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು